ನೋಡಿಕೊಂಡಳು ಅಹಲ್ಯೆ. ಏಕೋ ಕಣ್ಣಾಲಿಗಳು ತುಂಬಿಬಂದವು. ಒರೆಸಿಕೊಳ್ಳುವ ಗೋಜಿಗೆ ಹೋಗದೆ, ಸುಮ್ಮನೆ ಕುಳಿತೇಯಿದ್ದಳು.

ಮೂರು ದಿನಗಳು ತಮ್ಮ ಪಾಡಿಗೆ ತಾವು ಸರಿದುಹೋದವು.

ಅಹಲ್ಯೆ ನದಿಯೆಡೆಗೆ ಸುಳಿಯಲಿಲ್ಲ. ನಡೆದಿದ್ದನ್ನು ಪತಿಯೊಂದಿಗೆ ಹೇಳಿಬಿಡಬೇಕು ಎಂದು ಕಾದಳು. ಗೌತಮ ತಪಸ್ಸು, ಅಧ್ಯಯನದಲ್ಲಿ ಪೂರ್ತಿ ಮಗ್ನ! ಮೌನವಾಗಿ, ಒಂಟಿಯಾಗಿ ಕುಟೀರದಲ್ಲಿ ಕಂಬನಿ ಮಿಡಿಯುತ್ತ ಕಾಲಕಳೆದಳು.

ನಾಲ್ಕನೆಯ ದಿನ ರಾತ್ರಿ...

ಕೆಲಸ ಮುಗಿಸಿ, ಕುಟೀರದ ಬಾಗಿಲು ಎಳೆದು ಕೊಳ್ಳುವಾಗ ಅಲ್ಲಿ... ಆ ಮರೆದ ಮರೆಯಲ್ಲಿ... ಯಾರೋ ಕೈ ಮಾಡುತ್ತಿರುವಂತೆ ಭಾಸವಾಯಿತು. ಅವನೇನೇ? ಛೇ, ಗೌತಮರ ಆಶ್ರಮದೊಳಗೆ ಬಂದು, ಅವರ ಪತ್ನಿಯನ್ನು ಕೆಣಕುವಷ್ಟು ದಿಟ್ಟತನ ಯಾರಿಗಿದೆ? ತನ್ನ ಭ್ರಾಂತಿಗೆ ಮಿತಿಯಿಲ್ಲ. ಬಾಗಿಲು ಭದ್ರಪಡಿಸಿಕೊಂಡು ಬಂದು, ಆಗಲೇ ನಿದ್ದೆ ಹೋಗಿದ್ದ ಪತಿಯ ಪಕ್ಕದಲ್ಲಿ ಮುದುಡಿ ಮಲಗಿದಳು. ನಿದ್ರೆ ಬರಬೇಕೆಲ್ಲಿಂದ?

ಹೊರಳಾಡಿ, ಒದ್ದಾಡಿ ಇನ್ನೂ ನಸುಕು ಹರಿಯಲು ಬಹಳ ಹೊತ್ತಿರುವಾಗ ಜೋಂಪು ಹತ್ತಿದಂತಾಗಿತ್ತು.

ರಾತ್ರಿಯಿನ್ನೂ ಘನವಾಗಿರುವಾಗಲೇ, ಕೋಳಿ ಕೂಗಿದ್ದು ಕೇಳಿಸಿತು. ಗೌತಮ ಯಥಾಪ್ರಕಾರ ಎದ್ದು ಹೊರಹೋಗಿ, ಒಂದೆರಡು ಕ್ಷಣಗಳಲ್ಲೇ ಹಿಂದಿರುಗಿದಾಗ, ಆಶ್ಚರ್ಯವಾಯ್ತು, ಎದ್ದು ಕುಳಿತುಕೊಳ್ಳುವ ಪ್ರಯತ್ನದಲ್ಲಿರುವಾಗಲೇ, ಬಳಿಗೆ ಬಂದ ಗೌತಮ ಎರಡೂ ಕೈಗಳನ್ನು ಚಾಚಿ, ಅವಳನ್ನು ಬಳಸಿ ಎದೆಗೊತ್ತಿಕೊಂಡ!

ಆ ಸ್ಪರ್ಶದಲ್ಲಿ ಎಂದೂ ಇಲ್ಲದ ಉನ್ಮತ್ತತೆ ಇತ್ತು. ಆತುರ, ಅಧಿಕಾರವಿತ್ತು! ಅಹಲ್ಯೆ ಪುಳಕದಲ್ಲಿ ಮೈಮರೆತುಬಿಟ್ಟಳು. ಒಂದು ಕ್ಷಣ. ಒಂದೇ ಒಂದು ಕ್ಷಣ... ಅಷ್ಟೇ! ಮರುಕ್ಷಣ, ನಿದ್ದೆಯ ಮಂಪರು ಸರ್ರನೆ ಇಳಿಯಿತು!

ಅಲ್ಲ... ಇದು ತನ್ನ ಪತಿಯ ಸ್ಪರ್ಶ ಅಲ್ಲವೇ ಅಲ್ಲ! ಎಂಟೊಂಬತ್ತು ವರ್ಷ ಬಾಳ್ವೆ ಮಾಡಿದ ತನಗೆ ತಿಳಿಯದೇ? ಈ ನೀಳವಾದ ರೋಮ ಭರಿತ ಕೈಗಳು ತನ್ನ ಪತಿಯದಲ್ಲ! ಮಾಂಸಲವಾದ, ಸುವಾಸನೆಯ ಈ ದೇಹ, ಹರವಾದ ದೃಢವಾದ ಈ ಎದೆಯಂತೂ ತನ್ನ ಪತಿಯದಲ್ಲವೇ ಅಲ್ಲ!

ಈ ಆತುರ, ಉನ್ಮಾದ, ತುಂಬಾ ಅಧಿಕಾರಯುತವಾಗಿ, ನಿರಂಕುಶವಾಗಿ ತನ್ನನ್ನಾಕ್ರಮಿಸಿಕೊಳ್ಳುತ್ತಿರುವ ಈ ರೀತಿ... ಊಹೂಂ. ಈತ ಗೌತಮನಲ್ಲವೇ ಅಲ್ಲ!

ಅವಳ ವಿವೇಚನಾಶಕ್ತಿ ಎಚ್ಚರಗೊಳ್ಳುವಷ್ಟರಲ್ಲಿ ಅವಳಿಗರಿವಿಲ್ಲದಂತೆ ಅವಳ ದೇಹ ಸ್ಪಂದಿಸಿತು! ವಿರೋಧಿಸುವ ಶಕ್ತಿ ಸತ್ತು, ಆಕ್ರಮಣ ಆ ಕ್ಷಣಕ್ಕೆ ಪ್ರಿಯವಾಗಿಬಿಟ್ಟಿತು!

ಅಹಲ್ಯೆ ನಿಧಾನವಾಗಿ ಕರಗಿದಳು. ನೀರಾದಳು. ಹುಚ್ಚು ಪ್ರವಾಹದ ಹೊಳೆಯಲ್ಲಿ ತೇಲುತ್ತಿರುವವಳಂತೆ ಸುಖಿಸಿದಳು.

ಇದ್ದಕ್ಕಿದ್ದಂತೆ ಕುಟೀರದ ಬಾಗಿಲು ಧಡಾರನೆ ತೆರೆದುಕೊಂಡ ಸದ್ದಿಗೆ ಇಬ್ಬರೂ ಬೆಚ್ಚಿಬಿದ್ದರು! ನೆಲ ನಡಗುವಂತೆ ಧಪಧಪ ಹೆಜ್ಜೆ ಹಾಕುತ್ತಾ ಬಂದ ಗೌತಮರನ್ನು ನೋಡುತ್ತಿದ್ದಂತೆ ಅಹಲ್ಯೆ ನಖಶಿಖಾಂತ ನಡುಗಿದಳು!

ಕೆಂಡಕಾರುವ ಕಣ್ಣುಗಳ ಗೌತಮ, ನೇರ ಆ ವ್ಯಕ್ತಿಯ ರಟ್ಟೆಗಳನ್ನು ಹಿಡಿದು ದರದರ ಎಳೆದೊಯ್ದು, ಕುಟೀರದೆದುರಿಗಿನ ಅಂಗಳದಲ್ಲಿ ನಿಲ್ಲಿಸಿ ಅಬ್ಬರಿಸಿದ– 'ಅನಾಚಾರೀ... ಕಾಮೀ!...'

ಅಹಲ್ಯೆ ತಬ್ಬಿಬ್ಬಾಗಿಬಿಟ್ಟಳು. ಇದೇನಿದು ತನ್ನ ಪತಿ ಮಾಡುತ್ತಿರುವುದು? ತಪ್ಪಾಗುತ್ತಿದೆಯೆಂದು